

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್

**ಛಾಯಾಚಿತ್ರ ೮೬**

ಪಸಡೇನಾ ನಗರದ ಮಾಂಟೇರಿ ರಸ್ತೆಯ ಮೀಡ್ ಸಹೋದರಿಯರ ಬಂಗಲೆ ಎದುರು ತೆಗೆದ ಚಿತ್ರ ಇದು. ಸ್ವಾಮೀಜಿ ಈ ಚಿತ್ರದಲ್ಲಿ ಚರ್ಚಿನ ಪಾದ್ರಿಯಂತೆ ಓವರ್‌ಕೋಟ್ ಧರಿಸಿದ್ದಾರೆ, ಕೈಯಲ್ಲಿ ಒಂದು ಕೊಡೆ ಹಿಡಿದಿದ್ದಾರೆ.



ಛಾಯಾಚಿತ್ರ ೮೬

ಅದೃಷ್ಟವಶಾತ್ ಆ ದಿನಗಳಲ್ಲಿ ಹವೆ ಬೆಚ್ಚಗಿತ್ತು. ಸ್ವಾಮೀಜಿಯವರಿಗೆ ಇದು ಅನುಕೂಲಕರವಾಗಿತ್ತು. ತಮ್ಮ ನಿರಂತರ ಕಾರ್ಯಗಳ ನಡುವೆಯೂ ಓದುತ್ತಲೋ, ಬರೆಯುತ್ತಲೋ, ತೋಟದಲ್ಲಿ ಅಡ್ಡಾಡುತ್ತಲೋ ಅವರು ನಿರಾಳವಾಗಿ ಇರುತ್ತಿದ್ದರು.

ಆ ದಿನಗಳಲ್ಲಿಯೇ ಅವರು, "ತಾಯಿ ಲೀಲೆಯಾಡುವ ಪರಿಯನ್ನು ಬಲ್ಲವರಾರು?" (Who knows how mother plays) ಎಂಬ ತಮ್ಮ ಪ್ರಸಿದ್ಧ ಇಂಗ್ಲಿಷ್ ಕವಿತೆಯನ್ನು ರಚಿಸಿದರು.



ಛಾಯಾಚಿತ್ರ ೮೭



ಛಾಯಾಚಿತ್ರ ೮೮



ಛಾಯಾಚಿತ್ರ ೮೯

### ಛಾಯಾಚಿತ್ರ ೮೭

ಪಸಡೇನಾ ನಗರದಲ್ಲಿ ಮೀಡ್ ಸಹೋದರಿಯರ ಮನೆಯ ಬಳಿಯಿದ್ದ ಒಂದು ಗುಡ್ಡದ ಮೇಲೆ ಸ್ವಾಮೀಜಿ ಮತ್ತು ಅವರ ಸಂಗಡಿಗರು ವನಭೋಜನಕ್ಕೆ ಹೋದಾಗ ತೆಗೆದ ಚಿತ್ರ ಇದು. ಸ್ವಾಮೀಜಿಯವರ ಹಿಂಭಾಗದಲ್ಲಿ ಶ್ರೀಮತಿ ವೈಕಾಫ್, ಬಲದಲ್ಲಿ ಶ್ರೀಮತಿ ಬ್ಲೂಸ್ ಮತ್ತು ಎಡದಲ್ಲಿ ಶ್ರೀಮತಿ ಹ್ಯಾನ್ಸ್‌ಬ್ರೋ ಇದ್ದಾರೆ ಎಂದು ಗುರುತಿಸಲಾಗಿದೆ. ಈ ಚಿತ್ರದಲ್ಲಿ ಸ್ವಾಮೀಜಿ ಬಹಳ ಪ್ರಸನ್ನಚಿತ್ತರಾಗಿ ಕಂಡುಬರುತ್ತಾರೆ. ಅನುಕೂಲಕರವಾದ ಹವೆಯಲ್ಲಿ ಸ್ವಾಮೀಜಿ ತನ್ನ ಅನುಯಾಯಿಗಳೊಡನೆ ಆ ಗುಡ್ಡಕ್ಕೆ ಆಗಾಗ್ಗೆ ಹೋಗಿ, ಸುದೀರ್ಘ ಸಂಭಾಷಣೆಯಲ್ಲಿ ತೊಡಗುತ್ತಿದ್ದರು.

### ಛಾಯಾಚಿತ್ರ ೮೮

ಇದು ಛಾಯಾಚಿತ್ರ ೮೭ರಿಂದ ಪ್ರತ್ಯೇಕಿಸಿದ ಸ್ವಾಮೀಜಿಯವರ ಚಿತ್ರ. ವನಭೋಜನದ ಸಮಯದಲ್ಲಿ ಚಳಿಗಾಳಿ ಇತ್ತು. ಅದಕ್ಕಾಗಿ, ಇತರರ ಸಲಹೆಯ ಮೇರೆಗೆ ಸ್ವಾಮೀಜಿ ಕಿವಿಮುಚ್ಚುವ ಕೆಂಪುಟೋಪಿಯನ್ನು ಧರಿಸಿದ್ದರು. ಟೋಪಿಯ ಹಿಂಭಾಗದಲ್ಲಿ ದಟ್ಟವಾಗಿ ಬೆಳೆದ ಕೂದಲು ಕಾಣಿಸುತ್ತದೆ. ಶ್ರೀಮತಿ ಹ್ಯಾನ್ಸ್‌ಬ್ರೋ ಹೇಳುವ ಪ್ರಕಾರ, ಆ ಕಾಲದಲ್ಲಿ ಸ್ವಾಮೀಜಿಯವರಿಗೆ ದಟ್ಟವಾದ ಮತ್ತು ಅಲೆಯಲೆಯಾಗಿ ಬೆಳೆದ ಸುಂದರ ತಲೆಗೂದಲು ಬೆಳೆದಿತ್ತು. ಅದನ್ನು ಕತ್ತರಿಸಲು ಅವರ ಸಂಗಡಿಗರು ಬಿಡುತ್ತಿರಲಿಲ್ಲ.

### ಛಾಯಾಚಿತ್ರ ೮೯

ಪಸಡೇನಾ ಹತ್ತಿರ ನಡೆದ ಒಂದು ಕ್ಯಾಂಪ್‌ನಲ್ಲಿ ತೆಗೆದ ಸಾಮೂಹಿಕ ಚಿತ್ರ ಇದು. ಸ್ವಾಮೀಜಿಯವರನ್ನು ಬಿಟ್ಟರೆ ಮಿಕ್ಕವರನ್ನು ಗುರುತಿಸಲು ಸಾಧ್ಯವಾಗಿಲ್ಲ. ಸ್ವಾಮೀಜಿಯವರ ಸಾನ್ನಿಧ್ಯ ಮತ್ತು ಅವರ ಮಾತುಗಳು ಒಂದು ಆಧ್ಯಾತ್ಮಿಕ ವಾತಾವರಣವನ್ನು ಸುತ್ತಲೂ ತಾನಾಗಿಯೇ ನಿರ್ಮಾಣ ಮಾಡುತ್ತಿದ್ದವು. ಸ್ವಾಮೀಜಿ ಎಲ್ಲರ ದುಃಖಗಳನ್ನು ಸ್ವೀಕರಿಸುತ್ತಿದ್ದರು; ಸ್ವಾಮೀಜಿಯ ವಿಶಾಲವಾದ ಅನುಕಂಪದ ಸಾಗರದಲ್ಲಿ ಅವೆಲ್ಲವೂ ಮರೆಯಾಗುತ್ತಿದ್ದವು. ಒಮ್ಮೆ ಸ್ವಾಮೀಜಿ ಬೆಳಗ್ಗೆ ಹತ್ತು ಗಂಟೆಯಿಂದ ಮಧ್ಯಾಹ್ನ ನಾಲ್ಕು ಗಂಟೆಯವರೆಗೆ ಸತತವಾಗಿ, ಯಾವ ಅಡೆತಡೆಗಳೂ ಇಲ್ಲದೆ, ಮಾತನಾಡಿದರು. ಆ ಸಮಯದಲ್ಲಿ ಒಂದು ಪ್ರಚಂಡ ಅಧ್ಯಾತ್ಮ ಪ್ರವಾಹವನ್ನು ಹರಿಸಿದರು. ಹೀಗೆ ಆತಿಥೇಯಳಾಗಿದ್ದ ಶ್ರೀಮತಿ ಹ್ಯಾನ್ಸ್‌ಬ್ರೋ ತನ್ನ ನೆನಪುಗಳಲ್ಲಿ ಬರೆಯುತ್ತಾಳೆ.

### ಛಾಯಾಚಿತ್ರ ೯೦

ಈ ಚಿತ್ರ ಕೂಡ ಪಸಡೇನಾ ಹತ್ತಿರ ನಡೆದ ಕ್ಯಾಂಪ್‌ನಲ್ಲಿ ತೆಗೆದದ್ದು. "ಯಾವುದಾದರೂ ಒಂದು ವಿಷಯದಲ್ಲಿ ಸ್ವಾಮೀಜಿ ಆಸಕ್ತರಾಗಿದ್ದರೆ, ಅದನ್ನು ಉಜ್ವಲವಾಗಿ ಕಾಣುತ್ತಿದ್ದರು. ಆಗ ಅವರ ಕಣ್ಣುಗಳು ಹೊಳೆಯುತ್ತಿದ್ದವು." ಎಂದು ಶ್ರೀಮತಿ ಹ್ಯಾನ್ಸ್‌ಬ್ರೋ ಉದ್ಗರಿಸುತ್ತಾಳೆ. ❋

ಛಾಯಾಚಿತ್ರ ೯೦

